2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 115/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ನಿರಂಜನ್ ಕುಮಾರ್ | ಪಿಡಬ್ಲೂ - 14 |
| ತಂದೆಯ ಹೆಸರು | - | ಈರಪ್ಪ | ಸಿಡಬ್ಲೂ - 20 |
| ವಯಸ್ಸು | - | 49 ವರ್ಷ | |
| ಉದ್ಯೋಗ | - | ಆರಕ್ಷಕ ನಿರೀಕ್ಷಕರು, ಸಕಲೇಶಪುರ ಗ್ರಾಮಾಂತರ ವೃತ್ತ | |
| ವಾಸ ಸ್ಥಳ | - | ಸಕಲೇಶಪುರ | |

ದಿನಾಂಕಃ **13.12.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕಃ 28.05.2017 ರಿಂದ ದಿನಾಂಕ 18.07.2019 ರವರೆಗೆ ಚಿಕ್ಕಮಗಳೂರ ನಗರದ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿನಾಂಕಃ 19.10.2017 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪ್ರಾಸಾ-13 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಪ್ರಕರಣದ 1 ನೇ ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನಿನನ್ನು ಪಡೆದು ಹಾಜರಾಗಿದ್ದು ನಾನು ದಸ್ತಗಿರಿ ಕ್ರಮ ಅನುಸರಿಸಿ ನಂತರ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.
3. ದಿನಾಂಕ 22.10.2017 ರಂದು ಪ್ರಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪ್ರಾಸಾ-5 ಮತ್ತು ಚಾಸಾ-7 ರವರಿಗೆ ನಿಪಿ.14 ರಂತೆ ನೋಟೀಸನ್ನು ಜಾರಿ ಮಾಡಿ ಸ್ಥಳಕ್ಕೆ ಬರಮಾಡಿಕೊಂಡು ಅವರ ಸಮಕ್ಷಮ ಪ್ರಾಸಾ-1 ರವರು

ತೋರಿಸಿದ ಸ್ಥಳದಲ್ಲಿ ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ.12 ಮತ್ತು 14 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.12(ಸಿ) ಮತ್ತು 14(ಬಿ) ಎಂದು ಗುರುತಿಸಲಾಗಿರುತ್ತದೆ. ಸದರಿ ಪಂಚನಾಮೆಯ ಕಾಲಕ್ಕೆ ಪ್ರಾಸಾ-1 ರವರು ಅವರ ಅತ್ತೆ ಮತ್ತು ಮಾವಂದಿರಾದ 2 ಮತ್ತು 3 ನೇ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಒಂದು ಸ್ಟೀಲ್ ಚಾಕು ಮತ್ತು ಮೈಕ್ರೋ ಸಾಫ್ಟ್ ಎಂದು ಬರೆದಿದ್ದ ಒಂದು ಮೊಬೈಲ್ ಚಾರ್ಜರ್ ವೈಯರನ್ನು ಹಾಜರುಪಡಿಸಿದ್ದು ಅವುಗಳನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಚಾಕು ಮತ್ತು ಚಾರ್ಜರ್ ವೈಯರನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಸದರಿ ಮುದ್ದೆಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 27/2017 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ.23 ಎಂದು, ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ.

4. ದಿನಾಂಕ 01.05.2018 ರಂದು ಚಿಕ್ಕಮಗಳೂರು ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾಸಾ-11 ರವರಿಗೆ ಅಮಾನತ್ತುಪಡಿಸಿಕೊಂಡಿದ್ದ ಮು.ಮಾ-1 ಮತ್ತು 2 ನ್ನು ನಿಪಿ.18 ರಂತೆ ಮನವಿಯೊಂದಿಗೆ ಸಲ್ಲಿಸಿಕೊಂಡು ಅಭಿಪ್ರಾಯ ವರದಿಯನ್ನು ಕೋರಿರುತ್ತೇನೆ. ದಿನಾಂಕ 03.05.2018 ರಂದು

ಪ್ರಾಸಾ-11 ರವರಿಂದ ಆ ಬಗ್ಗೆ ನಿಪಿ.19 ರಂತೆ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ.19 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು.

5. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಾಸಾ-1 ರವರು ಚಿಕಿತ್ಸೆ ಪಡೆದಿದ್ದ ಬಗ್ಗೆ ಅದೇ ದಿನ ಗಾಯದ ಪ್ರಮಾಣ ಪತ್ರ ಮತ್ತು ಹೊರರೋಗಿ ಕಾರ್ಡನ್ನು ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರ ಮತ್ತು ಕಾರ್ಡನ್ನು ನೋಡುತ್ತಿದ್ದು ಅವುಗಳನ್ನು ನಿಪಿ.24 ಮತ್ತು 25 ಎಂದು ಗುರುತಿಸಲಾಯಿತು. ನಿಪಿ.24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳದ ದಾಖಲೆಯನ್ನು ಚಾಸಾ-14 ರವರಿಂದ ನಿಪಿ.20 ರಂತೆ ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ದಿನಾಂಕ 09.06.2018 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತೇನೆ. 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಐ ಎಸ್ ಟಿ ವಕೀಲರಿಂದ ಆರೋಪಿಗಳ ಪರವಾಗಿಃ</u>

6. ದಿನಾಂಕ 22.10.2017 ರಂದು ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಸದರಿ ಮನೆಯಲ್ಲಿ ಇದ್ದವರಿಗೆ ಪಂಚನಾಮೆಯನ್ನು ಜರುಗಿಸುವ ಮಾಹಿತಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಅಲ್ಲಿಗೆ ಭೇಟಿ ನೀಡಿದ

ಸಮಯದಲ್ಲಿ 2 ನೇ ಆರೋಪಿ ಅಲ್ಲಿ ಹಾಜರಿದ್ದರು. ಅಲ್ಲಿ ನೀವು ಯಾವುದಾದರು ದಾಖಲೆಗೆ 2 ನೇ ಆರೋಪಿಯ ಸಹಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದಿದ್ದಾರೆ. ಆ ಸಮಯದಲ್ಲಿ ಫ್ರಾಸಾ-1 ತಮ್ಮೊಂದಿಗೆ ಯಾವುದಾದರ ಬ್ಯಾಗ್ ಅಥವಾ ವಸ್ತುಗಳನ್ನು ತೆಗೆದುಕೊಂಡು ಬಂದಿದ್ದ ಬಗ್ಗೆ ನನಗೆ ಗೊತ್ತಿಲ್ಲ.

7. ನಿಪಿ.12 ಪಂಚನಾಮೆಯ ಪ್ರಕಾರ ಮು.ಮಾ-2 ಚಾಕುವನ್ನು ಯಾವ ನಿರ್ಧಿಷ್ಟ ಸ್ಥಳದಿಂದ ತಂದು ಹಾಜರುಪಡಿಸಲಾಗಿತ್ತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಸೆಲ್ಫ್ ಮೇಲೆ ಇದ್ದುದ್ದನ್ನು ತಂದು ಹಾಜರುಪಡಿಸಿದ್ದರು, ಆದರೆ ಆ ಬಗ್ಗೆ ನಿಪಿ.12 ರಲ್ಲಿ ಬರವಣಿಗೆ ಮಾಡಿಲ್ಲ. ಚಾಕು ಇದ್ದ ಸ್ಥಳದ ಫೋಟೋವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿದ್ದೇನೆ. ಸದರಿ ಫೋಟೋವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮು.ಮಾ-2 ರ ಚಾಕುವಿನ ಹಿಡಿ ಮತ್ತು ಮುಂಭಾಗ ಸುಟ್ಟಿದೆ, ಆದರೆ ಅದರ ಮಧ್ಯಭಾಗದಲ್ಲಿ ಸ್ವಲ್ಪ ಸುಟ್ಟಿಲ್ಲ, ಕಾರಣ ಆ ಭಾಗದಲ್ಲಿ ಉರಿ ಕಡಿಮೆ ತಾಗಿರಬಹುದು. ಗ್ಯಾಸ್ ಸ್ಟವ್ ನ ಬರ್ನಲ್ ನಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿ ಫ್ಲೇಮ್ ಬರುವ ರೀತಿ ಮಾಡಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದಿದ್ದಾರೆ. ಮು.ಮಾ-2 ರ ಮೇಲೆ ಮನುಷ್ಯರ ಚರ್ಮದ ಗುರುತು ಕಂಡುಬರುತ್ತದೆಯೇ ಎಂದರೆ ಸಾಕ್ಷಿ ಕಡಿಮೆ ಬಿಸಿ ಇದ್ದಾಗ ಸುಟ್ಟಿದ್ದರಿಂದ ಚರ್ಮದ ಗುರುತು ಅದರಲ್ಲಿ ಕಂಡುಬರುವುದಿಲ್ಲ ಎಂದಿದ್ದಾರೆ. ಮು.ಮಾ-2 ನ್ನು ತಜ್ಞರ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್.ಗೆ ಕಳುಹಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಕಳುಹಿಸಿಲ್ಲ, ಆದರೆ ವೈದ್ಯರಿಗೆ ಕಳುಹಿಸಿದ್ದೆ ಎಂದಿದ್ದಾರೆ.

8. ಮು.ಮಾ-1 ಚಾರ್ಜರ್ ಅನ್ನು ಯಾರ ಮೊಬೈಲಿಗೆ

ಬಳಸಲಾಗುತ್ತಿತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದಿದ್ದಾರೆ. ಸಾಮಾನ್ಯವಾಗಿ ಯಾವುದೇ ವೈಯರ್ ನಿಂದ ಬಿಗಿದು ಎಳೆದಾಗ ಆ ಭಾಗದಲ್ಲಿ ಇಂಜಿದಂತೆ ಕಂಡುಬರುತ್ತದೆ ಎಂದರೆ ಸಾಕ್ಷಿ ಹೌದು ಎಂದಿದ್ದಾರೆ. ಮು.ಮಾ-1 ರಲ್ಲಿ ಆ ರೀತಿ ಇಂಜಿದಂತಹ ಗುರುತು ಕಂಡುಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದಿದ್ದಾರೆ.

9. ಪ್ರಾಸಾ-1 ರವರ ತಂದೆಯಾದ ಪ್ರಾಸಾ-8 ರವರು ನಿಮ್ಮ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತಿಯಾಗಿದ್ದಾರೆ ಎಂದರೆ ಸರಿ. ನಿಪಿ.9 ರಿಂದ 11 ಫೋಟೋಗಳನ್ನು ನಾನು ಅಂತಿಮ ವರದಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದೇನೆ. ಸದರಿ ಫೋಟೋಗಳನ್ನು ಯಾವ ಸಾಧನದಲ್ಲಿ ತೆಗೆಯಲಾಗಿತ್ತು, ಅದನ್ನು ಯಾರು ಪ್ರಿಂಟ್ ಹಾಕಿಸಿದ್ದರು ಎಂದು ವಿಚಾರಿಸಿ ಅವರಿಂದ ದೃಢೀಕರಣ ಪತ್ರವನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಹಿಂದಿನ ತನಿಖಾಧಿಕಾರಿ ಅವುಗಳನ್ನು ಪಡೆದುಕೊಂಡಿದ್ದರು ಎನ್ನುತ್ತಾರೆ. ಸದರಿ ಫೋಟೋಗಳನ್ನು ಹೊರತುಪಡಿಸಿ ಅವುಗಳಿಗೆ ಸಂಬಂಧಿಸಿದ ಮೇಲೆ ಹೇಳಿದಂತಹ ಯಾವುದೇ ದಾಖಲೆಗಳನ್ನು ನಾನು ಅಂತಿಮ ವರದಿಯೊಂದಿಗೆ ಸಲ್ಲಿಸಿಕೊಂಡಿಲ್ಲ.

10. ನಿಪಿ.24 ರಲ್ಲಿ ಕುತ್ತಿಗೆಯ ಮುಂಭಾಗದಲ್ಲಿ Horizontal abrasion ಎಂದು ತಿಳಿಸಲಾಗಿದೆ ಎಂದರೆ ಸರಿ. ಮು.ಮಾ-1 ಮತ್ತು 2 ನ್ನು ಪಿರ್ಯಾದಿ ತಾನೆ ತನ್ನೊಂದಿಗೆ ತೆಗೆದುಕೊಂಡು ಬಂದು ನಿಮಗೆ ಹಾಜರುಪಡಿಸಿದ್ದು ಅವುಗಳನ್ನು ನೀವು ಹೇಳಿದಂತೆ ಆರೋಪಿತರ ಮನೆಯಿಂದ ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದು ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ನೀವು ಅಲ್ಲಿ ತೆಗೆದಿದ್ದೀರಿ ಎನ್ನಲಾದ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಪ್ರಾಸಾ-

11 ರವರಿಗೆ ಮು.ಮಾ-1 ಮತ್ತು 2 ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಮತ್ತು ನಿಮ್ಮ ಇಲಾಖೆಯವರಾದ ಪ್ರಾಸಾ-8 ಮತ್ತು ಅವರ ಮಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

11. ನಿಪಿ.12 ಪಂಚನಾಮೆಯ ಪಂಚರು ಸ್ಥಳೀಯರಲ್ಲ ಎಂದರೆ ಸರಿ. ದೂರಿನಲ್ಲಿ ತಿಳಿಸಲಾಗಿರುವ ಅಂಶಗಳು ಸುಳ್ಳು ನಿಮಗೆ ತಿಳಿದಿದ್ದರೂ ಸಹ ಯಾವುದೇ ತನಿಖೆಯನ್ನು ಮಾಡದೇ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಮತ್ತು ಮುದ್ದೆಮಾಲುಗಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಠಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು) ಓ.ಹೇ.ಕೇ.ಸ.ಇ.ಎ.ಒ.

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ